# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1354** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ. ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **22/08/2025** |
| **ಉತ್ತರಿಸುವವರು** | **ಮಾನ್ಯ ಕಾರ್ಮಿಕ ಸಚಿವರು** |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಎಷ್ಟು ಕಟ್ಟಡ ನಿರ್ಮಾಣ ಹಾಗೂ ಬೀಡಿ ಕಾರ್ಮಿಕರ ಗುರುತಿನ ಚೀಟಿಗಳಿವೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಒಟ್ಟು 28,11,561 ಕಟ್ಟಡ ಕಾರ್ಮಿಕರಿಗೆ ಹಾಗೂ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಜಾರಿಗೊಳಿಸುತ್ತಿರುವ ಅಂಬೇಡ್ಕರ್ ಕಾರ್ಮಿಕ ಸಹಾಯಹಸ್ತ ಯೋಜನೆಯಡಿ ಒಟ್ಟು 85,520 ಬೀಡಿ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದ್ದು, ಸದರಿ ಕಾರ್ಮಿಕರಿಗೆ ನೀಡಿರುವ ಗುರುತಿನ ಚೀಟಿ ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ನಕಲಿ ದಾಖಲೆಗಳನ್ನು ಸಲ್ಲಿಸಿ ನಕಲಿ ಕಟ್ಟಡ ಕಾರ್ಮಿಕರ ಚೀಟಿ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹವರ ವಿರುದ್ಧ ಸರ್ಕಾರ ಕೈಗೊಂಡ ಕಠಿಣ ಕ್ರಮಗಳಾವುವು; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನಕಲಿ ದಾಖಲೆಗಳನ್ನು ಸಲ್ಲಿಸಿ ಮಂಡಳಿಯಿಂದ ಕಟ್ಟಡ ಕಾರ್ಮಿಕರ ಚೀಟಿಗಳನ್ನು ಪಡೆದಿರುವ ಕಾರ್ಮಿಕರ ಗುರುತಿನ ಚೀಟಿಗಳನ್ನು ಪತ್ತೆ ಹಚ್ಚಿ ರದ್ದುಪಡಿಸಲಾಗಿದೆ. |
| ಇ) | ನಕಲಿ ಗುರುತಿನ ಚೀಟಿ ಪಡೆದಿರುವವರಲ್ಲಿ ಈಗಾಗಲೇ ಎಷ್ಟು ಗುರುತಿನ ಚೀಟಿಗಳನ್ನು ಹಿಂದಿರುಗಿಸಿ ನೋಂದಣಿ ರದ್ದುಪಡಿಸಿಕೊಳ್ಳುವ ಪ್ರಕ್ರಿಯೆ ನಡೆದಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನಕಲಿ ಗುರುತಿನ ಚೀಟಿ ಪಡೆದಿರುವವರಲ್ಲಿ ಈಗಾಗಲೇ ಒಟ್ಟು 2,42,391 ಗುರುತಿನ ಚೀಟಿಗಳನ್ನು ಹಿಂದಿರುಗಿಸಿ, ನೋಂದಣಿ ರದ್ದುಪಡಿಸಲಾದ ಗುರುತಿನ ಚೀಟಿಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ-2ರಲ್ಲಿ ಒದಗಿಸಿದೆ.** |

| | | |
|---|---|---|
| ಈ) | ಅಸಂಘಟಿತ ಬೀಡಿ ಕಟ್ಟುವ ಕಾರ್ಮಿಕರಿಗೆ ಒದಗಿಸಲಾಗುತ್ತಿರುವ ಸೌಲಭ್ಯ/ಸವಲತ್ತುಗಳು ಯಾವುವು; (ಸಂಪೂರ್ಣ ಮಾಹಿತಿ ಒದಗಿಸುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ಬೀಡಿ ಕಟ್ಟುವ ಕಾರ್ಮಿಕರೂ ಸೇರಿದಂತೆ 91 ವರ್ಗಗಳ ಅಸಂಘಟಿತ ಕಾರ್ಮಿಕರಿಗಾಗಿ **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ** ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br><br>**(ಅ) ಅಪಘಾತ ಪರಿಹಾರ ಸೌಲಭ್ಯ;**<br>**1.** ಮರಣ ಪ್ರಕರಣ - ರೂ. 1.00 ಲಕ್ಷದವರೆಗೆ ಅಪಘಾತ ಪರಿಹಾರ.<br>**2.** ಅಪಘಾತದಿಂದುಟಾಗುವ ಸಂಪೂರ್ಣ ಶಾಶ್ವತ/ ಭಾಗಶಃ ದುರ್ಬಲತೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ) - ರೂ. 1.00 ಲಕ್ಷದವರೆಗೆ ಪರಿಹಾರ.<br>**3.** ಆಸ್ಪತ್ರೆ ವೆಚ್ಚ ಮರುಪಾವತಿ - ರೂ. 50,000/- ದವರೆಗೆ.<br><br>**(ಆ) ಸಹಜ ಮರಣ ಪರಿಹಾರ (ಅಂತ್ಯಕ್ರಿಯೆ ಧನಸಹಾಯ)**<br>ನೋಂದಾಯಿತ ಫಲಾನುಭವಿಯು ವಯೋಸಹಜ/ ಖಾಯಿಲೆ /ಅಕಾಲಿಕ ಅಥವಾ ಇನ್ನಿತರೆ ಕಾರಣಗಳಿಂದ ಮರಣ ಹೊಂದಿದಲ್ಲಿ ಫಲಾನುಭವಿಯ ಕುಟುಂಬದವರಿಗೆ ಅಂತ್ಯಕ್ರಿಯೆ ವೆಚ್ಚಕ್ಕಾಗಿ ರೂ.10,000/- ಗಳ ಧನ ಸಹಾಯ ಸೌಲಭ್ಯ. |
| ಉ) | ಬೀಡಿ ಕಟ್ಟಡಗಳ ಮಾಲೀಕರುಗಳು ಬೀಡಿ ಕಟ್ಟುವ ಕಾರ್ಮಿಕರಿಗೆ ಕಾರ್ಮಿಕ ಚೀಟಿಗಳನ್ನು ಪಡೆಯಲು ಆಗದಂತೆ ತೊಂದರೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಅಂತಹ ಮಾಲೀಕರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳಾವುವು? (ಸಂಪೂರ್ಣ ಮಾಹಿತಿ ಒದಗಿಸುವುದು) | ಕಟ್ಟಡಗಳ ಮಾಲೀಕರು ಬೀಡಿ ಕಟ್ಟುವ ಕಾರ್ಮಿಕರಿಗೆ ಕಾರ್ಮಿಕ ಚೀಟಿಗಳನ್ನು ಪಡೆಯಲು ಆಗದಂತೆ ತೊಂದರೆ ಮಾಡುತ್ತಿರುವ ಕುರಿತಂತೆ ಯಾವುದೇ ದೂರುಗಳು ಸ್ವೀಕೃತಿಯಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಅಂತಹ ದೂರುಗಳು ಕಂಡುಬಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. |

**ಕಾಇ 342 ಎಲ್ಇಟಿ 2025**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ-1

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1124(1354)**

| ಕ್ರ.ಸಂ. | ಜಿಲ್ಲೆ | ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿರುವ ಚಾಲ್ತಿಯಲ್ಲಿರುವ ಸದಸ್ಯರ ಸಂಖ್ಯೆ | ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿಯಾದ ಕಾರ್ಮಿಕರ ಸಂಖ್ಯೆ |
|---|---|---|---|
| 1 | ಬಾಗಲಕೋಟೆ | 115675 | 226 |
| 2 | ಬಳ್ಳಾರಿ | 58816 | 2599 |
| 3 | ಬೆಳಗಾವಿ | 169606 | 1265 |
| 4 | ಬೆಂಗಳೂರು ಗ್ರಾಮಾಂತರ | 21125 | 619 |
| 5 | ಬೆಂಗಳೂರು ನಗರ | 338775 | 685 |
| 6 | ಬೀದರ್ | 124783 | 26 |
| 7 | ಚಾಮರಾಜನಗರ | 36808 | 3145 |
| 8 | ಚಿಕ್ಕಬಳ್ಳಾಪುರ | 42429 | 646 |
| 9 | ಚಿಕ್ಕಮಗಳೂರು | 69581 | 318 |
| 10 | ಚಿತ್ರದುರ್ಗ | 91762 | 1003 |
| 11 | ದಕ್ಷಿಣಕನ್ನಡ | 64794 | 20655 |
| 12 | ದಾವಣಗೆರೆ | 123732 | 5845 |
| 13 | ಧಾರವಾಡ | 127951 | 2380 |
| 14 | ಗದಗ | 76121 | 444 |
| 15 | ಹಾಸನ | 65711 | 189 |
| 16 | ಹಾವೇರಿ | 89844 | 4962 |
| 17 | ಕಲಬುರಗಿ | 161737 | 87 |
| 18 | ಕೊಡಗು | 6585 | 52 |
| 19 | ಕೋಲಾರ | 81863 | 3922 |
| 20 | ಕೊಪ್ಪಳ | 162211 | 173 |
| 21 | ಮಂಡ್ಯ | 30561 | 2859 |
| 22 | ಮೈಸೂರು | 120478 | 6122 |
| 23 | ರಾಯಚೂರು | 65418 | 25 |
| 24 | ರಾಮನಗರ | 37946 | 3331 |
| 25 | ಶಿವಮೊಗ್ಗ | 74571 | 751 |
| 26 | ತುಮಕೂರು | 90819 | 16372 |
| 27 | ಉಡುಪಿ | 43433 | 4351 |
| 28 | ಉತ್ತರಕನ್ನಡ | 113802 | 76 |
| 29 | ವಿಜಯನಗರ | 21085 | 330 |
| 30 | ವಿಜಯಪುರ | 96027 | 46 |
| 31 | ಯಾದಗಿರಿ | 87512 | 2016 |
| | ಒಟ್ಟು | 2811561 | 85520 |

# ಅನುಬಂಧ-2

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1124(1354)**

| Sl No. | District Name | Total No. of Labour Card Freezed Count |
|---|---|---|
| 1 | ಬಾಗಲಕೋಟೆ | 2629 |
| 2 | ಬೆಂಗಳೂರು ಗ್ರಾಮಾಂತರ | 398 |
| 3 | ಬೆಂಗಳೂರು ನಗರ | 3998 |
| 4 | ಬೆಳಗಾವಿ | 1328 |
| 5 | ಬಳ್ಳಾರಿ | 1507 |
| 6 | ಬೀದರ್ | 26124 |
| 7 | ಬೀಜಾಪುರ | 2271 |
| 8 | ಚಾಮರಾಜನಗರ | 851 |
| 9 | ಚಿಕ್ಕಬಳ್ಳಾಪುರ | 1511 |
| 10 | ಚಿಕ್ಕಮಗಳೂರು | 1953 |
| 11 | ಚಿತ್ರದುರ್ಗ | 1629 |
| 12 | ದಕ್ಷಿಣಕನ್ನಡ | 1077 |
| 13 | ದಾವಣಗೆರ | 3813 |
| 14 | ಧಾರವಾಡ | 3029 |
| 15 | ಗದಗ | 2679 |
| 16 | ಗುಲ್ಬರ್ಗ | 2891 |
| 17 | ಹಾಸನ | 2664 |
| 18 | ಹಾವೇರಿ | 157768 |
| 19 | ಕೊಡಗು | 178 |
| 20 | ಕೋಲಾರ | 2011 |
| 21 | ಕೊಪ್ಪಳ | 2051 |
| 22 | ಮಂಡ್ಯ | 454 |
| 23 | ಮೈಸೂರು | 1774 |
| 24 | ರಾಯಚೂರು | 543 |
| 25 | ರಾಮನಗರ | 2810 |
| 26 | ಶಿವಮೊಗ್ಗ | 6767 |
| 27 | ತುಮಕೂರು | 1322 |
| 28 | ಉಡುಪಿ | 362 |
| 29 | ಉತ್ತರಕನ್ನಡ | 4608 |
| 30 | ವಿಜಯಪುರ | 354 |
| 31 | ಯಾದಗಿರಿ | 1037 |
| | ಒಟ್ಟು | 242391 |